# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

# ನಂಜನಗೂಡು

**ಸಿ.ಸಿ. ನಂ.1005-2018** **ಡಿ .ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆ ಹೆಸರು<br>ವಯಸ್ಸು<br>ಉದ್ಯೋಗ<br>ವಾಸ್ತವ್ಯ | ಎಸ್.ಮಾಲಯ್ಯ<br>ಲೇ. ಸಿದ್ಧಯ್ಯ<br>56 ವರ್ಷ<br>ವ್ಯವಸಾಯ<br>ಕೊಳ್ಳೇಗಾಲ |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 09-01-2023. |

**ಮುಖ್ಯ ವಿಚಾರಣೆಃ ಶ್ರೀ ಎನ್.ಎಸ್.ಸಿ.ಕೆ ವಕೀಲರಿಂದಃ**

2016 ರ ಏಪ್ರಿಲ್ ತಿಂಗಳಿನಲ್ಲಿ ನಾನು ಪಿರ್ಯಾದಿದಾರರಿಗೆ ಕಾವೇರಿ ಗ್ರಾಮೀಣ ಬ್ಯಾಂಕಿಗೆ ಸಂಬಂಧಪಟ್ಟ 4 ಚೆಕ್‌ಗಳನ್ನು ನೀಡಿ ರೂ.20,000/- ಗಳನ್ನು ಸಾಲವಾಗಿ ಪಡೆದುಕೊಂಡಿದ್ದೆನು. ನಾನು ಪಿರ್ಯಾದಿದಾರರಿಂದ ಪಡೆದಿದ್ದ ರೂ.20,000/- ಗಳನ್ನು ಡಿಸೆಂಬರ್ 2016 ರಲ್ಲಿ ಮರುಪಾವತಿ ಮಾಡಿರುತ್ತೇನೆ. ನಾನು ಪಿರ್ಯಾದಿದಾರರಿಂದ ರೂ.20,000/-ಗಳನ್ನು ಪಡೆದುಕೊಂಡಾಗ ಸಾಲದ ಭದ್ರತೆಗಾಗಿ ನೀಡಿದ್ದ 4 ಚೆಕ್‌ಗಳ ಪೈಕಿ ಒಂದು ಚೆಕ್ ಅನ್ನು ಉಪಯೋಗಿಸಿಕೊಂಡು ಪಿರ್ಯಾದಿದಾರರು ಈ ಪ್ರಕರಣವನ್ನು ನನ್ನ ವಿರುದ್ಧ ದಾಖಲು ಮಾಡಿರುತ್ತಾರೆ. ಉಳಿದ 3 ಚೆಕ್ ಗಳನ್ನು ಅವರ ಸ್ನೇಹಿತರಾದ ಮಹದೇವು ರವರಿಗೆ ನೀಡಿ ತಲಾ ರೂ.50,000/- ಗಳಿಗೆ 2 ಪ್ರಕರಣಗಳನ್ನು ಹಾಗೂ ರೂ.1,00,000/- ಗಳಿಗೆ ಒಂದು ಪ್ರಕರಣವನ್ನು ನನ್ನ ವಿರುದ್ದ ಒಂದನೇ ಹೆಚ್ಚುವರಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಸಿ.ಸಿ.796/2018, ಸಿ.ಸಿ.797/2018 ಮತ್ತು ಸಿ.ಸಿ.798/2018 ರಂತೆ ದಾಖಲಿಸಿರುತ್ತಾರೆ.

2. ನಾನು ಪಿರ್ಯಾದಿದಾರರನ್ನು ಸಾಲದ ಹಣವನ್ನು ಮರುಪಾವತಿ ಮಾಡಿದ್ದರು ಏಕೆ ನನ್ನ ವಿರುದ್ಧ ಪ್ರಕರಣಗಳನ್ನು ದಾಖಲಿಸಿದ್ದೀರಿ ಎಂದು ಕೇಳಿದ್ದಕ್ಕೆ ಬಡ್ಡಿ ಹಣದ ಪಾವತಿಗಾಗಿ ಪ್ರಕರಣವನ್ನು ದಾಖಲಿಸಿರುವುದಾಗಿ ತಿಳಿಸಿದರು. ನಾನು ನನ್ನ ಮನೆಯನ್ನು 20 ಲಕ್ಷ ರೂಪಾಯಿಗಳಿಗೆ

ಮಾರಾಟ ಮಾಡಿದ್ದು, ಅದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಪಿರ್ಯಾದಿದಾರರು ಪ್ರಕರಣಗಳನ್ನು ದಾಖಲು ಮಾಡಿರುತ್ತಾರೆ. ನಾನು ಪಿರ್ಯಾದಿದಾರರಿಂದ ಪಡೆದಿದ್ದ ಸಾಲವನ್ನು ಮರುಪಾವತಿ ಮಾಡಿದ ನಂತರ ಚೆಕ್ ಅನ್ನು ವಾಪಸ್ಸು ಮಾಡುವಂತೆ ಕೇಳಿದಾಗ ಚೆಕ್ ಕಳೆದು ಹೋಗಿದ್ದು ಅದನ್ನು ಹುಡುಕಿ ಕೊಡುವುದಾಗಿ ತಿಳಿಸಿದರು. ಆ ವೇಳೆಗೆ ನಾನು ಕಾರ್ಖಾನೆಯಲ್ಲಿ ಕೆಲಸ ಬಿಟ್ಟಿದ್ದರಿಂದ ಅವರನ್ನು ಸಂಪರ್ಕಿಸಲು ಸಾಧ್ಯಾವಾಗಲಿಲ್ಲ. ನಾನು 2017 ರಲ್ಲಿ ಪಿರ್ಯಾದಿದಾರರನ್ನು ಭೇಟಿ ಆಗಿರುವುದಿಲ್ಲ, ಆದರೆ ಪಿರ್ಯಾದಿದಾರರು ನಾನು 2017 ರಲ್ಲಿ ಅವರಿಂದ ಸಾಲ ಪಡೆದಿರುವುದಾಗಿ ತಿಳಿಸಿರುತ್ತಾರೆ. ಆದರೆ ಆ ಸಮಯ ನನಗೆ ಪಿರ್ಯಾದಿದಾರರ ಸಂಪರ್ಕ ಇರಲಿಲ್ಲ ಹಾಗೂ ಆ ವೇಳೆಗೆ ನಾನು ಮನೆಯನ್ನು ಮಾರಾಟ ಮಾಡಿದ್ದರಿಂದ ನನಗೆ ಹಣದ ಅವಶ್ಯತಕೆಯೂ ಸಹ ಇರಲಿಲ್ಲ. ಪಿರ್ಯಾದಿದಾರರು ನನ್ನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ. ಆದುದರಿಂದ ಪಿರ್ಯಾದಿದಾರರು ಸಲ್ಲಿಸಿರುವ ಪಿರ್ಯಾದನ್ನು ವಜಾಕರಿಸಬೇಕಾಗಿ ಕೇಳಿಕೊಳ್ಳುತ್ತೇನೆ.

(ಪಾಟೀ ಸವಾಲಿಗೆ ಪಿರ್ಯಾದಿ ಪರ ವಕೀಲರು ಸಮಯವಕಾಶ ಕೋರಿದ್ದು, ಸಮಯವಕಾಶ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**